O.S.50/2012
PW-2

**ಸಾಕ್ಷಿಯನ್ನು ದಿನಾಂಕ 09-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**
**ಪಾಟೀ ಸವಾಲುಃ- 1 ಮತ್ತು 7 ನೇ ಪ್ರತಿವಾದಿಗಳ ಪರ ಶ್ರೀ DGT ವಕೀಲರಿಂದಃ**

ನನ್ನ ಹುಟ್ಟೂರು ಮಧುಗಿರಿ ತಾಲ್ಲೂಕಿನ ಶಂಭೋನಹಳ್ಳಿ ಗ್ರಾಮ ಎಂದರೆ ಸರಿ. ಶಂಭೋನಹಳ್ಳಿ ಗ್ರಾಮದಿಂದ ತೋವಿನಕೆರೆ ಗ್ರಾಮಕ್ಕೆ ಸುಮಾರು **3-4** ಕಿ ಮೀ ದೂರ ಇದೆ ಎಂದರೆ ಸರಿ. ವಾದಿಯ ಮುತ್ತಾತ ಹನುಮಂತಯ್ಯನಿಗೆ **3** ಜನ ಹೆಣ್ಣು ಮಕ್ಕಳು, **5** ಜನ ಗಂಡು ಮಕ್ಕಳಿದ್ದು ಆ ಪೈಕಿ ನಾನು ಗಂಡುಮಕ್ಕಳನ್ನು ಮಾತ್ರ ನೋಡಿರುತ್ತೇನೆ. ಹೆಣ್ಣು ಮಕ್ಕಳನ್ನು ನೋಡಿರುವುದಿಲ್ಲ, ಅವರನ್ನು ಯಾವ ಊರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ, ಆ ಪೈಕಿ ಯಾರು ಜೀವಂತ ಇದ್ದಾರೆಂದು ಹಾಗೂ ಅವರಿಗೆ ಯಾರು ಯಾರು ಮಕ್ಕಳು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು **40-50** ವರ್ಷಗಳಿಂದ ನಾನು ತೋವಿನಕೆರೆ ಗ್ರಾಮದಲ್ಲಿ ವಾಸ ಮಾಡುತ್ತಿರುತ್ತೇನೆ. ಹನುಮಂತಯ್ಯ ಕುಟುಂಬ ದೊಡ್ಡ ಕುಟುಂಬವಾಗಿದ್ದು ಅವರಿಗೆ ಹೆಚುಚ ಜಮೀನು ಇದ್ದು, ಸದರಿ ಜಮೀನು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಹನುಮಂತಯ್ಯನ ಮಕ್ಕಳು ಮೊದಲು ಒಟ್ಟು ಕುಟುಂಬದಲ್ಲಿ ಇದ್ದು, ಸುಮಾರು **10-15** ವರ್ಷಗಳ ಹಿಂದೆ ಬೇರೆ ಬೇರೆ ಆಗಿರುತ್ತಾರೆ. ಆ ರೀತಿ ಬೇರೆ ಆಗಿರುವ ಬಗ್ಗೆ ನನಗೆ ಗೊತ್ತು, ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಹನುಮಂತಯ್ಯನ ಮಕ್ಕಳು ಜೊತೆಯಲ್ಲಿ ಇದ್ದ ಬಗ್ಗೆ ನನಗೆ ಗೊತ್ತು, ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಯಾವ ಯಾವ ಸರ್ವೆ ನಂಬರ್ ಹನುಮಂತಯ್ಯನ ಮಕ್ಕಳ ಹೆಸರಿಗೆ ಜಂಟಿ ಆಗಿ ಬರುತ್ತಿವೆ ಎಂದು ನನಗೆ ಗೊತ್ತಿಲ್ಲ.

**2.** ನಾನು ಶಂಭೋನಹಳ್ಳಿ ಗ್ರಾಮದಿಂದ ತೋವಿನಕೆರೆಗೆ ಬಂದಾಗ ತೋವಿನಕೆರೆಯಲ್ಲಿ ಗಂಗಾಧರೇಶ್ವರ **Rural education society** ಹೆಸರಿನಲ್ಲಿ ಶಾಲೆ ನಡೆಯುತ್ತಿತ್ತು ಎಂದರೆ ಸರಿ. ನಾನು ಸದರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆಂದರೆ ಸರಿ. ಸದರಿ ಸಂಸ್ಥೆ ಹೆಸರಿನಲ್ಲಿ **2022-23** ರವರೆಗೂ **2023** ನೇ ಶಾಲೆಯಲ್ಲಿ ಕಾಲೇಜು ನಡೆಯುತ್ತಿದ್ದು, ಪ್ರೌಢಶಾಲೆ ನಡೆಯುತ್ತಿರಲಿಲ್ಲ. ಈ ದಾವೆಯನ್ನು **2012** ರಲ್ಲಿ ಸಲ್ಲಿಸಿರುತ್ತಾರೆಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ **1** ನೇ ಪ್ರತಿವಾದಿ ಸಂಸ್ಥೆ ಹೆಸರಿನಲ್ಲಿ ಪ್ರೌಢಶಾಲೆ, **PUC, JOC and Degree** ಕಾಲೇಜ್ ನಡೆಯುತ್ತಿತ್ತು ಎಂದರೆ ಸರಿ. **1** ನೇ ಪ್ರತಿವಾದಿ ಸಂಸ್ಥೆ ನಡೆಸುತ್ತಿದ್ದ ಶಾಲೆಯ ಕಟ್ಟಡದ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಹನುಮಂತಯ್ಯನ **8** ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ.

**3.** ನಾನು ರಾಜಕೀಯದಲ್ಲಿದ್ದು **VSSN society** ಚುನಾವಣೆಗೆ ಸ್ಪರ್ಧಿಸಿರುತ್ತೇನೆಂದರೆ ಸರಿ. **1** ನೇ ಪ್ರತಿವಾದಿ ಸಂಸ್ಥೆಗೆ ಸಂಬಂಧಿಸಿದ ಆಡಳಿತ ಮಂಡಳಿ ಇತ್ತು. ಸದರಿ ಸಂಸ್ಥೆಗೆ ವಜ್ರಣ್ಣ ಎಂಬುವರು

ಅಧ್ಯಕ್ಷರಾಗಿದ್ದರು, 7 ನೇ ಪ್ರತಿವಾದಿಯ ತಂದೆ ಕಾರ್ಯದರ್ಶಿ ಆಗಿದ್ದರು. ಸದರಿ ಸಂಸ್ಥೆಯಲ್ಲಿ 13 ಜನ ಸದಸ್ಯರು ಇದ್ದು ಅವರೆಲ್ಲರ ಹೆಸರುಗಳನ್ನು ನನ್ನಿಂದ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿ ಸಂಸ್ಥೆಯ ಕಾರ್ಯದರ್ಶಿ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಹನುಮಂತರಾಯಪ್ಪ ತೀರಿಕೊಂಡ ನಂತರ 7 ನೇ ಪ್ರತಿವಾದಿ 1 ನೇ ಪ್ರತಿವಾದಿ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುತ್ತಾರೆಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನು ಸಾಕ್ಷ್ಯ ನೀಡುವಾಗ ನನ್ನ ಬಳಿ 7 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಕ್ರಯ ಪತ್ರವನ್ನು ಇಟ್ಟುಕೊಂಡಿದ್ದೆ. 7 ನೇ ಪ್ರತಿವಾದಿ ತಂದೆ ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ.

**4.** ಸರ್ವೆ ನಂ 63 ವಿಸ್ತೀರ್ಣ 30 ಗುಂಟೆ ಆಸ್ತಿಯನ್ನು ಸೂರೇನಹಳ್ಳಿ ಗ್ರಾಮದ ವೆಂಕಟರಮಣಪ್ಪರವರು 1 ನೇ ಪ್ರತಿವಾದಿ ಸಂಸ್ಥೆ ಹೆಸರಿಗೆ ದಾನ ಮಾಡಿರುತ್ತಾರೆಂದರೆ ಸರಿ. ಸದರಿ ಸಂಸ್ಥೆಯಲ್ಲಿ ನಡೆಯುವ ಶಾಲೆ ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆದ ಕಾರಣ ಪಧವಿ ಕಾಲೇಜ್ ನಡೆಸಬೇಕೆಂದು ಪ್ರತ್ಯೇಕವಾಗಿ ಕಟ್ಟಡವನ್ನು ಕಟ್ಟಿರುತ್ತಾರೆಂದರೆ ಶಾಲೆಯಲ್ಲಿ ಸ್ಥಳಾಂತರ ಮಾಡುವ ಸಲುವಾಗ ಪ್ರತ್ಯೇಕವಾಗಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತಾರೆ. ಆ ಬಗ್ಗೆ ತೋವಿನಕೆರೆ ಗ್ರಾಮದಲ್ಲಿ ಮಾತನಾಡಿಕೊಳ್ಳುತ್ತಿದ್ದ ಕಾರಣ ನನಗೆ ಗೊತ್ತಾಗಿರುತ್ತದೆ. ಶಾಲೆಯನ್ನು ಸ್ಥಳಾಂತರ ಮಾಡುವ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. 7 ನೇ ಪ್ರತಿವಾದಿ ಮತ್ತು ಅವರ ತಂದೆ ಶಾಲೆಯನ್ನು ಬೇರೆ ಕಡೆ ಸ್ಥಳಾಂತರ ಮಾಡಲು ಯೋಚನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಶಾಲೆಗೆ ನೀಡಿದ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿದ್ದು, ನಂತರ ಆಸ್ತಿಯನ್ನು ವಾಪಸ್ ನೀಡುವುದಾಗಿ ಹೇಳಿರುತ್ತಾರೆ, ಆ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ಸಂಸ್ಥೆ ಹೆಸರಿನಲ್ಲಿ ನಡೆಯುತ್ತಿರುವ ಶಾಲೆ ಮತ್ತು ಕಾಲೇಜು ಕಟ್ಟಡ ಇರುವ ಜಾಗವು ವಾದಿಯ ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ, ವಾದಿಯ ತಾತನಾದ ಟಿ ಹೆಚ್ ಚಿಕ್ಕಯ್ಯಣ್ಣರವರ ಭಾಗಕ್ಕೆ ಬಂದಿದ್ದ ಆಸ್ತಿಯನ್ನು 1 ನೇ ಪ್ರತಿವಾದಿ ಸಂಸ್ಥೆಗೆ ದಾನವಾಗಿ ನೀಡಿರುತ್ತಾರೆಂದರೆ ಸರಿಯಲ್ಲ.

**5.** ಟಿ ಹೆಚ್ ಚಿಕ್ಕಯ್ಯಣ್ಣರವರ ಸಹೋದರರ ಭಾಗಕ್ಕೆ ಬಂದ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಹನುಮಂತಯ್ಯರವರ 5 ಜನ ಗಂಡುಮಕ್ಕಳು 1956 ಬೞಲ ಸಾಲಿನಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿ, ಪ್ರತಿವಾದಿ 4 ರಿಂದ 6 ಮತ್ತು 8 ರವರು 1956 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿದ್ದು ಆ ಪೈಕಿ ಕೆಲವು ಆಸ್ತಿಗಳನ್ನು ಅವರೆಲ್ಲರೂ 2011 ನೇ ಸಾಲಿನಲ್ಲಿ ಸಿದ್ದಪ್ಪ ಬಿನ್ ಹೊನ್ನಕಳಸಪ್ಪ ಎಂಬುವರಿಗೆ ಮಾರಾಟ

ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**6.** ಸರ್ವೆ ನಂ **121** ರಲ್ಲಿ **1** ನೇ ಪ್ರತಿವಾದಿ ಶಾಲೆ ನಡೆಸುತ್ತಿದ್ದು ಸದರಿ ಸರ್ವೆ ನಂಬರ್ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ತೋವಿನಕೆರೆ ಗ್ರಾಮದ ಸರ್ವೆ ನಂ **121/1** ರಲ್ಲಿ ಒಟ್ಟು **2** ಎಕರೆ **2** ಗುಂಟೆ ಪೈಕಿ **1** ಎಕರೆಯಲ್ಲಿ **1** ನೇ ಪ್ರತಿವಾದಿ ಸಂಸ್ಥೆ ಹೆಸರಿನಲ್ಲಿ ಶಾಲೆ ನಡೆಯುತ್ತಿದ್ದು, **26** ಗುಂಟೆ ರತ್ನಮ್ಮ ಕೋಂ ಭೀಮರಾಜು, ಹನುಮಂತಪ್ಪ ಮತ್ತು ರಾಜಣ್ಣರವರ ಹೆಸರಿನಲ್ಲಿ ಪಹಣಿ ಬರುತ್ತಿದ್ದು, ಸದರಿ ವಿಸ್ತೀರ್ಣದ ಜಮೀನಿನಲ್ಲಿ ಅವರೆಲ್ಲರೂ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆಂದರೆ, ಮನೆಗಳನ್ನು ಕಟ್ಟಿರುತ್ತಾರೆ ಆದರೆ ವಾಸ ಮಾಡುತ್ತಿರುವುದಿಲ್ಲ. ದಾವಾ ಸರ್ವೆ ನಂ **121/1** ರಲ್ಲಿ **16** ಗುಂಟೆ ಜಮೀನನ್ನು ವಾದಿಯ ತಾತ ಟಿ ಹೆಚ್ ಚಿಕ್ಕಯ್ಯಣ್ಣರವರು ತೋವಿನಕೆರೆ ಗ್ರಾಮದ ಹನುಮಂತಯ್ಯ ಬಿನ್ ಸಂಜೀವಯ್ಯ ಎಂಬುವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಹನುಮಂತಯ್ಯರವರ ಅಡಿಕೆ ಬೆಳೆ ಇಟ್ಟುಕೊಂಡು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆಂದರೆ, ಆ ಜಮೀನು ಯಾವುದು ಎಂದು ನನಗೆ ಗೊತ್ತಿಲ್ಲ.

**7. 1** ನೇ ಪ್ರತಿವಾದಿ ಸಂಸ್ಥೆಯ ಹೆಸರಿಗೆ ಬರೆದ ದಾನ ಪತ್ರವನ್ನು ನಾನು ಓದಿ ನೋಡಿರುವುದಿಲ್ಲ. **7** ನೇ ಪ್ರತಿವಾದಿ ಹೆಂಡತಿ ಸುನಂದಾರವರನ್ನು ನನ್ನ ವಿರುದ್ಧವಾಗಿ **VSSN society** ಯ ಚುನುವಾಣೆಗೆ ನಿಲ್ಲಿಸಿದ್ದರು ಎಂದರೆ ಸರಿ. ಅಂದಿನಿಂದ ನನ್ನ ಹಾಗೂ **7** ನೇ ಪ್ರತಿವಾದಿ ನಡುವೆ ವಿಶ್ವಾಸ ಚೆನ್ನಾಗಿ ಇಲ್ಲದೇ ಇರುವ ಕಾರಣ ನಾನು ಅವರಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಹಾಗೂ ಅವರ ಕುಟುಂಬದವರಿಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲ, **1** ನೇ ಪ್ರತಿವಾದಿ ಸಂಸ್ಥೆ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ, ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆಗಿದ್ದು ಎಲ್ಲರಿಗೂ ಸೇರಿದ ಆಸ್ತಿ ಆಗಿರುತ್ತದೆ. ವಾದಿ ನನ್ನ ಸ್ನೇಹಿತನಾದ ಕಾರಣ ಅವರಿಗೆ ಸಹಾಯ ಮಾಡುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.50/2012
PW-2

O.S.50/2012

PW-2

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.

*Koratagere.*